ಅಂಗನವಾಡಿ ಕಟ್ಟಡಗಳು

281 (708) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) :– ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಈ ಹಿಂದೆ ನಿರ್ಮಿಸಲಾಗಿರುವ ಅಂಗನವಾಡಿ ಕಟ್ಟಡಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇಂತಹ ಕಟ್ಟಡಗಳ ದುರಸ್ತಿಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? (ಮಾಹಿತಿ ನೀಡುವುದು)

ಶ್ರೀ ಕಳಶಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) 2011–12ನೇ ಸಾಲಿನಿಂದ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ಇಲಾಖಾ ವಂತಿಗೆಯಡಿ ಅಂಗನವಾಡಿ ಕಟ್ಟಡಗಳ ನಿರ್ವಹಣೆಗಾಗಿ ಅನುದಾನ ಒದಗಿಸಲಾಗುತ್ತಿದೆ. ಈ ಯೋಜನೆಯಡಿ 2012–13ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳ ನಿರ್ವಹಣೆಗಾಗಿ ರೂ. 15.00 ಕೋಟಿ ಅನುದಾನವನ್ನು ಒದಗಿಸಲಾಗಿರುತ್ತದೆ. ಈ ಅನುದಾನವನ್ನು ಅಂಗನವಾಡಿ ಕಟ್ಟಡಗಳ ದುರಸ್ತಿಗೆ ವಿನಿಯೋಗಿಸಲು ಸೂಚನೆಗಳನ್ನು ನೀಡಲಾಗಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆ

266 (729) ಶ್ರೀ ಪಾಟೀಲ್ ಎಂ.ಬಿ. (ಬರ್ಬಲೇಶವರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ಅಡಿ ವಿಜಾಪುರ ಜಿಲ್ಲೆಯಲ್ಲಿ 2010–11, 2011–12 ನೇ ಸಾಲಿನಲ್ಲಿ ಪ್ರೌಢಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗಿದೆ; (ಕ್ಷೇತ್ರವಾರು ಮಾಹಿತಿ ನೀಡುವುದು)

ಆ) 2012–13ನೇ ಸಾಲಿನಲ್ಲಿ ಹೊಸದಾಗಿ ಪ್ರೌಢ ಶಾಲೆಗಳನ್ನು

ಪ್ರಾರಂಭಿಸಲಾಗಿದೆಯೇ ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು ;

ಇ) ಪ್ರೌಢ ಶಾಲೆಗಳನ್ನು ಪ್ರಾರಂಭಿಸಿದ ಸ್ಥಳಗಳಲ್ಲಿ ಎಷ್ಟು ಶಾಲೆಗಳಿಗೆ ನಿವೇಶನ ಲಭ್ಯತೆ ಇದೆ ಹಾಗೂ ಇನ್ನೂ ಎಷ್ಟು ಶಾಲೆಗಳಿಗೆ ನಿವೇಶನದ ಅವಶ್ಯಕತೆ ಇರುತ್ತದೆ;

ಈ) ನಿವೇಶನ ಲಭ್ಯವಿದ್ಧ ಸ್ಥಳಗಳಲ್ಲಿ ಪ್ರೌಢಶಾಲೆಗಳ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪಟ್ಟಿ ಲಗತ್ತಿಸಿದೆ.

ಆ) 2012–13ನೇ ಸಾಲಿನಲ್ಲಿ ಹೊಸದಾಗಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಿರುವುದಿಲ್ಲ.

ಕೇಂದ್ರ ಸರ್ಕಾರವು ಹೊಸದಾಗಿ ಪ್ರಾರಂಭಿಸುವ ಪ್ರೌಢಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ 2008–09ನೇ ಸಾಲಿನ ಸೆಂಟ್ರಲ್ ಪಿ.ಡಬ್ಲ್ಯೂ.ಡಿ ಎಸ್.ಓ.ಆರ್. ನಂತೆ ರೂ. 58.12 ಲಕ್ಷ ಘಟಕ ದರ ನಿಗದಿ ಪಡಿಸಿದ್ದು.

2011–12ರ ರಾಜ್ಯದ ಪಿ.ಡಬ್ಲ್ಯೂ.ಡಿ. ಎಸ್.ಓ.ಆರ್. ದರದಂತೆ ಇದು 80.62 ಆಗಿದ್ದು ಪರಿಷ್ಕೃತ ದರದಂತೆ ನೀಡಲು ಕೋರಲಾಗಿತ್ತು.

ಕೇಂದ್ರ ಸರ್ಕಾರವು 2011–12ನೇ ಸಾಲಿನ ಪರಿಷ್ಕೃತ ದರಗಳಲ್ಲಿ ನೀಡಲು ಸಾಧ್ಯವಾಗುವುದಿಲವೆಂದು ತಿಳಿಸಿ ಯಾವುದೇ ಪ್ರೌಢಶಾಲೆಯನ್ನು ಮಂಜೂರು ಮಾಡಿರುವುದಿಲ್ಲ ಆದ್ದರಿಂದ ಪ್ರಾರಂಭಿಸಿರುವುದಿಲ್ಲ.

ಇ) ಆರ್.ಎಂ.ಎಸ್.ಎ. ಯಿಂದ ಪ್ರಾರಂಭಿಸುವ ಎಲ್ಲಾ ಪ್ರೌಢ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭವಾಗುವುದರಿಂದ ನಿವೇಶನ ಲಭ್ಯ ಇರುವ ಶಾಲೆಗಳನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ) ಕಟ್ಟಡ ನಿರ್ಮಾಣಕ್ಕಾಗಿ ಟೆಂಡರ್ ಕರೆಯಲಾಗಿದ್ದು ಟೆಕ್ನಿಕಲ್ ಬಿಡ್ ಮೌಲ್ಯಮಾಪನ ನಡೆಯುತ್ತಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ

ಹೊಸ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ಸರ್ಕಲ್, ಬೆಂಗಳೂರು

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಉನ್ನತೀಕರಿಸಲಾದ ಬಿಜಾಪುರ ಜಿಲ್ಲೆಯ ಶಾಲೆಗಳ ವಿವರ

ಜಿಲ್ಲೆಯ ಹೆಸರು : ಬಿಜಾಪುರ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಶಾಲೆಯ ಹೆಸರು	ಮಾಧ್ಯಮ	ಪ್ರಾರಂಭಿಸಿದ ವರ್ಷ
1	ಬಿಜಾಪುರ ನಗರ	ಹಿರಿಯ ಪ್ರಾಥಮಿಕ ಶಾಲೆ ಯತ್ನಾಳ	ಕನ್ನಡ	2010–11
2	ಬಿಜಾಪುರ ನಗರ	ಹಿರಿಯ ಪ್ರಾಥಮಿಕ ಶಾಲೆ ನಂ.1 ದೌಲತ್ ಕೋಟೆ	ಉರ್ದು	2010–11
3	ಬಿಜಾಪುರ (ಗ್ರಾ)	ಹಿರಿಯ ಪ್ರಾಥಮಿಕ ಶಾಲೆ ಕುಮಟೆ	ಕನ್ನಡ	2010–11
4	ಬಿಜಾಪುರ (ಗ್ರಾ)	ಹಿರಿಯ ಪ್ರಾಥಮಿಕ ಶಾಲೆ ಬರಟಗಿ	ಕನ್ನಡ	2010–11
5	ಬಿಜಾಪುರ (ಗ್ರಾ)	ಹಿರಿಯ ಪ್ರಾಥಮಿಕ ಶಾಲೆ ಕೃಷ್ಣಾನಗರ	ಕನ್ನಡ	2010–11
6	ಇಂಡಿ	ಸ.ಹಿ.ಪ್ರಾ. ಶಾಲೆ ಬರಗುಡಿ	ಕನ್ನಡ	2009–10
7	ಇಂಡಿ	ಹಿರಿಯ ಪ್ರಾಥಮಿಕ ಶಾಲೆ ಗೊರನಾಳ	ಕನ್ನಡ	2010–11
8	ಇಂಡಿ	ಹಿರಿಯ ಪ್ರಾಥಮಿಕ ಶಾಲೆ ಆಲೂರ್	ಕನ್ನಡ	2010–11
9	ಇಂಡಿ	ಹಿರಿಯ ಪ್ರಾಥಮಿಕ ಶಾಲೆ ಬಂತನಾಳ್	ಕನ್ನಡ	2010–11
10	ಇಂಡಿ	ಯು.ಬಿ.ಮಾದರಿ ಪ್ರಾಥಮಿಕ ಶಾಲೆ ಇಂಡಿ	ಉರ್ದು	2010–11
11	ಚಡ್ ಚಣ	ಹಿರಿಯ ಪ್ರಾಥಮಿಕ ಶಾಲೆ ಕಟ್ರಾಳ್	ಕನ್ನಡ	2010–11
12	ಚಡ್ ಚಣ	ಹಿರಿಯ ಪ್ರಾಥಮಿಕ ಶಾಲೆ ಅರ್ಜಾನಾಳ್	ಕನ್ನಡ	2010–11
13	ಮುದ್ದೇಬಿಹಾಳ್	ಹಿರಿಯ ಪ್ರಾಥಮಿಕ ಶಾಲೆ ರೋಡಗಿ	ಕನ್ನಡ	2010–11

14	ಮದ್ದೇಬಿಹಾಳ್	ಹಿರಿಯ ಪ್ರಾಥಮಿಕ ಶಾಲೆ ತಾಳಿಕೋಟೆ	ಕನ್ನಡ	2010–11
15	ಸಿಂಧಗಿ	ಹಿ.ಪ್ರಾ.ಶಾಲೆ ಖೈನೂರ	ಕನ್ನಡ	2009–10
16	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಆಲ್ಮೆಲ್	ಕನ್ನಡ	2010–11
17	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಬೊಮ್ಮನಹಳ್ಳಿ	ಕನ್ನಡ	2010–11
18	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ರಾಂಪುರ	ಕನ್ನಡ	2010–11
19	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಕೆರುಟಗಿ	ಕನ್ನಡ	2010–11
20	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಕೊಕ್ಕಟನೂರ್	ಕನ್ನಡ	2010–11
21	ಸಿಂಧಗಿ	ಯು.ಬಿ.ಹಿರಿಯ ಪ್ರಾಥಮಿಕ ಶಾಲೆ ಮಲಗಾಂವ್	ಉರ್ದು	2010–11
22	ಬಸವನ ಬಾಗೇವಾಡಿ	ಕೆ.ಬಿ.ಎಸ್.ಪ.ಎಸ್. ತಳೇವಾಡ	ಕನ್ನಡ	2009–10
23	ಬಸವನ ಬಾಗೇವಾಡಿ	ಹಿರಿಯ ಪ್ರಾಥಮಿಕ ಶಾಲೆ ದಿಂಡಾವಾರ	ಕನ್ನಡ	2010–11
24	ಬಸವನ ಬಾಗೇವಾಡಿ	ಹಿರಿಯ ಪ್ರಾಥಮಿಕ ಶಾಲೆ ಕುಬಕಡ್ಡಿ	ಕನ್ನಡ	2010–11

ಮೈಸೂರು ವಿಶ್ವವಿದ್ಯಾನಿಲಯದ ಅಕ್ರಮ ನೇಮಕಾತಿ

218 (15) ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಕ್ರಮ ನೇಮಕಾತಿಯ ಬಗ್ಗೆ ಈ ಹಿಂದೆ ವಿಧಾನಸಭೆಯಲ್ಲಿ ಚರ್ಚೆಯಾಗಿದ್ದು, ಅಕ್ರಮ ನೇಮಕಾತಿ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಕ್ರಮ ನೇಮಕಾತಿಗೆ ಕಾರಣರಾದವರ ವಿರುದ್ಧ ಯಾವುದೇ